ಅದಾಗಲೇ ಅವರಿಗೆ ಏನೇನೊ ಕಾಯಿಲೆಗಳು ಹಿಡಿದುಕೊಂಡಿದ್ದವು. ಗೊತ್ತೇ ಆಗುತ್ತಿರಲಿಲ್ಲ. ಹಾದಿಬೀದಿಯ ಪುಟ್ಟ ಪೇಟೆಯ ದಂದೆಯಲ್ಲಿ ಅವರು ಹೊಟ್ಟೆ ಬಟ್ಟೆಗಾಗಿಯೇ ಪರದಾಡಬೇಕಿತ್ತು. ಮೂರು ಕಾಸನ್ನು ಉಳಿಸಿಕೊಳ್ಳುವುದೇ ದೊಡ್ಡ ಸಾಧನೆ ಎನಿಸಿತ್ತು. ಆ ಹಳ್ಳಿ ಮನೆಯ ರಿಪೇರಿ ಮಾಡಿಸಿಕೊಂಡಿದ್ದರು. ಎಲ್ಲಾ ಸೂಳಾಟವ ಆಡಿ ಮುಗಿಸಿ ಈಗ ಊರ ನೆನಪಾಯಿತೇ... ಯಾಕೆ ವಾಪಸ್ಸು ಬಂದಿರಿ ಎಂದು ನೆರೆಹೊರೆಯ ಹೆಂಗಸರು ಗಿಂಜಾಡಿದರು. ಬಹಳ ಮಾನವಂತರಂತೆ ಗಂಡಸರು ನಮ್ಮ ಕೇರಿಗೆ ಇವರಿಂದ ಅವಮಾನ ಎಂದು ಕ್ಯಾತೆ ತೆಗೆದು, ಎಲ್ಲಿಯಾದರೂ ಹಾಳಾಗಿ ಹೋಗಿ ಎಂದು ಕಿತಾಪತಿ ಮಾಡುತ್ತಲೇ ಇದ್ದರು. ಆ ದಂಥೆಯ ಒರಟುತನವ ಮೈಗೂಡಿಸಿಕೊಂಡಿದ್ದ ಅವರು ಸರಿಯಾಗಿಯೇ ತಿರುಗಿಬಿದ್ದು ಸೀರೆ ಎತ್ತಿ ತೋರಿಸಿ ಬನ್ನಿ ಅದೇನ್ ಕಿತ್ತಾಕ್ತಿರೋ ಕಿತ್ತಾಕಿ ಎಂದು ಕಾಳಿಯರಾದ ಕೂಡಲೇ ಬಾಯಿ ಮುಚ್ಚಿದ್ದರು. ಕೊನೆಯ ಹತಾಶೆಯ ದಿನಗಳಲ್ಲಿ ಪ್ರತಿರೋಧಿಸಿದ್ದರು. ಕಾಲ ಮೀರಿತ್ತು. ಆದರೂ ನಗುವುದನ್ನು ಬಿಟ್ಟಿರಲಿಲ್ಲ. ಬೆಳಗಾನ ಮಾತಲ್ಲಿ ಮುಳುಗಿರುತ್ತಿದ್ದರು. ಆ ಮುದಿ ಗಿರಾಕಿ ಹಾಗೆ, ಆ ಬಾಲಕ ಹೀಗೆ, ಆ ಮುಠಾಳನೊ ಆ ಷಂಡನೋ ಹಾಗೆ ಹೀಗೆ ಎಂದು ಆಡಿ ನಗಾಡಿ ನಟ್ಟಿರುಳ ಮುಗಿಸುತ್ತಿದ್ದರು. ಆಗಾಗ ಜೋರಾಗಿ ನಗುತ್ತಿದ್ದರು. ಕ್ರೂರ ಮೌನವ ಸಹಿಸಲು ಅವರಿಂದ ಆಗುತ್ತಿರಲಿಲ್ಲ. ಅಡ್ಡಗೋಡೆಯ ಮೇಲಿನ ದೀಪದ ಕುಡಿಯ ಬೆಳಕು ಅವರನ್ನು ಸುತ್ತಿ ಸುತ್ತಿ ಎಸೆವಂತೆ ಅವರ ನೆರಳುಗಳ ಮೂಲೆಗೆ ಬಿಸಾಡುತ್ತಿತ್ತು. ಅವರಿಗೆ ನಿದ್ದೆಯೇ ಬರುತ್ತಿರಲಿಲ್ಲ. ಕೋಳಿ ಕೂಗುವತನಕ ಎಚ್ಚರವಾಗಿಯೇ ಇದ್ದು ಏನಾದರೊಂದು ಮಾತ ಆಡುತ್ತಲೇ ಇದ್ದರು. ಅವರ ಮೈಮೇಲೆ ದೆವ್ವಗಳು ಬಂದು ಸೇರಿಕೊಂಡಿವೆ ಎಂದು ಜನ ಅವರ ಸಹವಾಸ ಬೇಡ ಎಂದು ದೂರ ಇದ್ದರು. ಅಪರೂಪಕ್ಕೆ ಮಂಡ್ಯಕ್ಕೆ ಹೋಗಿ ಒಟ್ಟಾಗಿ ವ್ಯವಹಾರ ಮಾಡಿ ಸಂತೆ ಮುಗಿಸಿಕೊಂಡು ಬಂದು ಗಂಜಿ ನೀರು ಕುಡಿಯುತ್ತಿದ್ದರು. ಕೇರಿ ಬಹಳ ವೇಗವಾಗಿ ನಗರಗಳತ್ತ ಮುನ್ನುಗ್ಗುತ್ತಿತ್ತು. ಊರಿನ ಹಳೆಯ ಜೀತದಿಂದ ವಿಮೋಚನೆ ಕಂಡವರಂತೆ ಪೇಟೆಯಲ್ಲಿ ಸಲೀಸಾಗಿ ಸಿಗುವ ನೂರೆಂಟು ಕೂಲಿಗಳ ಹಣವ ಕಂಡು, ಹಳ್ಳಿ ಹಳ್ಳಿಗಳೇ ತಮ್ಮನ್ನು ತಾವೇ ಮಾರಿಕೊಳ್ಳುತ್ತಿದ್ದವು. ಆ ಅತ್ತೆಯರು ಸಾಕಪ್ಪ ಈ ದಂಧೆಯ ಪೇಟೆಯ ರೋಗ ಎಂದು ಒಳಗೊಳಗೇ ನರಳಿ ನವೆಯುತ್ತಿದ್ದರು. ಅವನು ಆಗ ಆ ಅತ್ತೆಯರ ಕಿನ್ನರ ಲೋಕದ ಕಥೆಗಳಲ್ಲಿ ತಬ್ಬಲಿತನವ ಮರೆಯುತ್ತಿದ್ದವನು, ಈಗ ಅವನೇ ಒಬ್ಬ ಮೋಡಿಕಾರ ಕಥೆಗಾರನಾಗಿ ಬದಲಾಗಿಬಿಟ್ಟಿದ್ದ. ಯೂನಿವರ್ಸಿಟಿಯಲ್ಲಿ ಕೆಲಸವೂ ಸಿಕ್ಕಿಬಿಟ್ಟಿತ್ತು. ಮಂಡ್ಯದಲ್ಲಿ ಆಗ ತಾನೆ ಪಿ.ಜಿ.ಸೆಂಟರ್ ಆರಂಭಿಸಿದ್ದರು. ಅಲ್ಲಿ ಅವನು ದೊಡ್ಡ ಮನುಷ್ಯ ಆಗಿಬಿಟ್ಟಿದ್ದ. ಅವನ ಸುತ್ತ ಯಾವಾಗಲೂ ಅವನ ಅಭಿಮಾನಿ ವಿದ್ಯಾರ್ಥಿಗಳು ಸುತ್ತಿಕೊಂಡೇ ಇರುತ್ತಿದ್ದರು. ಜಗತ್ತಿನ ಮೂಲೆ ಮೂಲೆಯ ಸ್ವರ್ಗ-ನರಕಗಳ ಅದ್ಭುತವಾಗಿ ನೆರೆದವರ ಮುಂದೆ ಮೈ ಮರೆತು ಮಾತನಾಡುತ್ತಿದ್ದ. ಅಂತಹ ಒಂದು ದಿನ ಪರಿಮಳದ ಕ್ಯಾಂಪಸ್ಸಿನ ಹುಡುಗಿಯರ ಕಟ್ಟಿಕೊಂಡು ಬಸ್ಸಿಗಾಗಿ ಅದೇ ಮಂಡ್ಯದ ಬಸ್ ನಿಲ್ದಾಣದಲ್ಲಿ ಹರಟೆ ಹೊಡೆಯುತ್ತಿದ್ದ. ಚಿಕ್ಕ ವಯಸ್ಸಿಗೇ ಕೆಲಸ ಸಿಕ್ಕಿದ್ದರಿಂದ ಹೆಚ್ಚು ಕಡಿಮೆ ಅವನಿಗೆ ಹೊಂದುವ ಪ್ರಾಯದ ಚೆಂದದ ಹುಡುಗಿಯರು ಗುಪ್ತ ಪೈಪೋಟಿಯಲ್ಲಿ ಮುತ್ತಿಕೊಂಡಿದ್ದರು. ಕ್ಯಾಂಪಸ್ಸಿಗೆ ಹೋಗಬೇಕಿತ್ತು. ಆ ಬಸ್ಸು ಲಡಾಸಾಗಿತ್ತು. ಯಾವಾಗ ಬರುತ್ತೋ ಬರುವುದಿಲ್ಲವೋ ಎಂಬುದೇ ಗೊತ್ತಾಗುತ್ತಿರಲಿಲ್ಲ. ಹಳ್ಳಿದಾರಿಯ ಜನರೂ ಅದೇ ಬಸ್ಸಿಗೆ ಬಂದು ಮುಗಿಬೀಳುತ್ತಿದ್ದರು. ಏನೋ ನಗೆ ಲಹರಿಯಲ್ಲಿದ್ದ. ಸಹೋದ್ಯೋಗಿ ಹಿರಿಯ ಮಿತ್ರರೂ ದೊಡ್ಡ ಪ್ರಾಧ್ಯಾಪಕರೂ ಜೊತೆಗೇ ಇದ್ದರು. ಬಸ್ ನಿಲ್ದಾಣ ಗಿಜಿಗುಟ್ಟುತ್ತಿತ್ತು. ಯಾರೊ ಅವನ ಹತ್ತಿರವೇ ಬಂದು ನಿಂತು ಗಮನ ಸೆಳೆಯಲು ಜೋರಾಗಿ ನಗಾಡಿದ್ದರು. ಅವನ ಗಮನಕ್ಕೆ ಬಂದಿರಲಿಲ್ಲ. ಚೆಲುವೆಯರ ಮಾದಕ ದೇಹವೇ ಅವನ ಕಣ್ಣುಗಳ ತುಂಬಿಕೊಂಡಿದ್ದವು. ಹುಡುಗರು ಬಸ್ಸು ಬಂದರೆ ನುಗ್ಗಿ ಸೀಟು ಹಿಡಿದುಕೊಳ್ಳಲು ತವಕದಲ್ಲಿದ್ದರು. ಆ ಹುಡುಗಿಯರೂ ನಗುತ್ತಿದ್ದರು. ಆ ನಗುವ ಎಲ್ಲೊ ಎಂದೋ, ಬಹಳ ಹಿಂದೆ ಕೇಳಿದ್ದಂತೆನಿಸಿ ಅವನ ಒಳಗೆ ಯಾರೋ ಕರೆದಂತಾಯಿತು. ಅತ್ತಿತ್ತ ನೋಡಿದ. ಜನರ ಗದ್ದಲ ಹರಿದಾಡುತ್ತಿತ್ತು. ಯಾರೋ ಮೂರು ಜನ ಹೆಂಗಸರು ಎಂದುಕೊಂಡ.

ಮತ್ತೆ ಏನೋ ನಗಿಸುತ್ತಿದ್ದ. ಯಾರೋ ತನ್ನನ್ನೇ ಗಮನಿಸುತ್ತಿದ್ದಾರೆ ಎನಿಸಿತವನಿಗೆ. ಅತ್ತಲೇ ದಿಟ್ಟಿಸಿ